## ಕಲವಧುವಿಗೆ ಮಂಗಳಹಾಡಿ

ಕಲರ್ಸ್ ಕನ್ನಡದ ಕುಲವಧು ಕಥೆಯೇ ಇಲ್ಲದೇ, ನಿರ್ದಿಷ್ಟ ಗುರಿ ಇಲ್ಲದೆ ಬೇಸರದತ್ತ ಎಳೆದುಕೊಂಡು ಹರಿದಾಡುತ್ತಿದೆ. ಅಪಾರ ಕುಕೃತ್ಯಗಳಲ್ಲಿ ಭಾಗಿಯಾಗಿ ಶಿಕ್ಷೆಗೆ ಒಳಗಾಗಬೇಕಾಗಿದ್ದ ನಿಖಿಲ್ ಮತ್ತು ಕಾಂಚನ ಏಳು ವರ್ಷಗಳು ಕಳೆದರೂ ಎಲ್ಲೋ ಅವಿತುಕೊಳ್ಳುವಂತೆ ಮಾಡಿದ್ದಾರೆ. ಕಾಂಚನಾಳ ಕೋಮಾ ಸ್ಥಿತಿಯೇ ಧಾರಾವಾಹಿಗೂ ತಟ್ಟಿದಂತಿದೆ.

ಯಾವುದೇ ಕಾರಣವಿಲ್ಲದೆ ಹಠಾತ್ ಆಗಿ ಮನೆ ಯಜಮಾನ ಪದ್ಮರಾಜ್ ಮತ್ತು ಅವರ ಮಗ ಗೌತಮ್‌ರನ್ನು ಇನ್ನಿಲ್ಲವಾಗಿಸಿದ್ದಾರೆ. ಈಗ ಹೊಸ ತಿರುವು, ಹೊಸ ಖಳನಾಯಕಿಯರು, ಭವ್ಯ ಪಾತ್ರವಂತೂ ವಿಪರೀತ ಕಿರಿಕಿರಿಯನ್ನು ಹುಟ್ಟಿಸುತ್ತದೆ. ಪಾತ್ರಧಾರಿಗಳಂತೆ ವೀಕ್ಷಕರೂ ಇನ್ನೆಷ್ಟು ಕಿರುಕುಳ ಅನುಭವಿಸಬೇಕೋ? ಕುಲವಧುವಿಗೆ ಶೀಘ್ರ ಮಂಗಳಸೂತ್ರ ತೊಡಿಸಿ ಮಂಗಳ ಹಾಡಿದರೆ ಕ್ಷೇಮ.

—ಶ್ರೀಧರ್, ಬೆಂಗಳೂರು

### ವಾರದ ಪತ್ರ

## ಬೇಸಿಗೆಗೆ ಡಬಲ್ ಧಮಾಕಾ

ಕನ್ನಡ ಕಿರುತೆರೆಯ ನಿರೀಕ್ಷೆಯ ಕಾರ್ಯಕ್ರಮ 'ವೀಕೆಂಡ್ ವಿಥ್ ರಮೇಶ್' ನಾಲ್ಕನೇ ಆವೃತ್ತಿ ಆರಂಭವಾಗುತ್ತಿರುವುದು ಸಂತಸ ತಂದಿದೆ. ಎಂದಿನಂತೆ ನಟ ರಮೇಶ್ ಅರವಿಂದ್ ನಿರೂಪಣೆ ಶೈಲಿ ಮನೋಲ್ಲಾಸಗೊಳಿಸುವಂತಹದು ಎಂದು ನನ್ನ ಭಾವನೆ. ಹೊಸ ಆವೃತ್ತಿಯ ಮೊದಲ ಅತಿಥಿಯಾಗಿ ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರು ಭಾಗವಹಿಸಿದ್ದಾರೆ ಇದನ್ನು ನೋಡಲು ನನಗೆ ಕುತೂಹಲವಿತ್ತು. ಈಗಾಗಲೇ ಪ್ರೋಮೊಗಳು ಪ್ರಸಾರವಾಗಿದ್ದು ವೀರೇಂದ್ರ ಹೆಗ್ಗಡೆ ಕುರಿತು ಹಲವು ಸೆಲೆಬ್ರಿಟಿಗಳು, ಸ್ವಾಮಿಜೀಗಳು ವೀಕೆಂಡ್‌ನಲ್ಲಿ ಮಾತನಾಡಿದ್ದಾರೆ ಎಂಬುದು ಕೇಳಿ ಖುಷಿಯಾಗಿದೆ. ಇನ್ನೊಂದು ವಿಶೇಷ ಅಂದ್ರೆ ಸುವರ್ಣ ವಾಹಿನಿಯಲ್ಲಿ ಪ್ರಸಾರವಾಗುತ್ತಿದ್ದ ಕನ್ನಡದ ಕೋಟ್ಯಧಿಪತಿ, ಕಲರ್ಸ್ ಕನ್ನಡ ವಾಹಿನಿಲ್ಲಿ ಮತ್ತೆ ಪ್ರಸಾರ ಆಗುತ್ತಿದೆ. ಮೊದಲೆರಡು ಆವೃತ್ತಿಯಲ್ಲಿ ನಿರೂಪಣೆ ಮಾಡಿದ್ದ ಪುನೀತ್ ರಾಜ್ ಕುಮಾರ್, ಕಳೆದ ಆವೃತ್ತಿಯಲ್ಲಿ ನಿರೂಪಣೆ ಮಾಡಿರಲಿಲ್ಲ. ಇದೀಗ ಪುನೀತ್ ಮತ್ತೆ ಆಗಮಿಸುತ್ತಿದ್ದಾರೆ. ಇವು ಬೇಸಿಗೆಗೆ ಕನ್ನಡ ವಾಹಿನಿಗಳಲ್ಲಿ ಡಬಲ್ ಧಮಾಕಾವೇ ಸರಿ!

—ವಿಜಯ್‌ಕುಮಾರ್ ಎಚ್. ಕೆ. ರಾಯಚೂರು

## ಸನದಿ ಸೇವೆ ಅಪಾರ

ಕನ್ನಡ ಚಂದನ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ ಶುಭೋದಯ ಕಾರ್ಯಕ್ರಮದ ಭಾಗವಾಗಿ 'ನೆನಪಿನಂಗಳ' ಎಂದು ಪ್ರಸಾರವಾಗುತ್ತಿದೆ. ಅನೇಕ ಕಲಾವಿದರ, ಲೇಖಕರು ಮತ್ತು ಕವಿಗಳ ಸಂದರ್ಶನಗಳ ಭಾಗಗಳನ್ನು ಪ್ರೇಕ್ಷಕರಿಗೆ ತೋರಿಸುತ್ತಾರೆ. ಇತ್ತೀಚೆಗೆ ನಮ್ಮನ್ನಗಲಿದ ಸರಳ ಸಜ್ಜನಿಕೆಯ ಉತ್ತರ ಕರ್ನಾಟಕದ ಪ್ರಸಿದ್ಧ ಕವಿ ಡಾ. ಬಿ.ಎ. ಸನದಿ ಅವರ ಹಲವು ನೆನಪುಗಳ ನುಡಿ ಚಿತ್ರಗಳನ್ನು ತೋರಿಸಿ ಕವಿಗೆ ಚಂದನ ವಾಹಿನಿ ತನ್ನದೇ ಆದ ನುಡಿ ನಮನವನ್ನು ಸಲ್ಲಿಸಿತು. ಬಿ.ಎ. ಸನದಿಯವರು, 1933ರಲ್ಲಿ ಬೆಳಗಾವಿ ಜಿಲ್ಲೆಯ ಸಿಂದೊಳ್ಳಿಯಲ್ಲಿ ಜನಿಸಿದ ಅವರು, ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಅದರಲ್ಲೂ ಕಾವ್ಯಕ್ಕೆ ಹೆಚ್ಚು ಒತ್ತು ಕೊಟ್ಟು ಸುಮಾರು 17 ಕವನ ಸಂಕಲಗಳನ್ನು ಓದುಗರಿಗೆ ನೀಡಿದ್ದಾರೆ. ವಿಮರ್ಶೆ, ಕಥಾ ಸಾಹಿತ್ಯ, ನಾಟಕ, ಅನುವಾದ ಮತ್ತು ಮಕ್ಕಳ ಸಾಹಿತ್ಯದಂತಹ ವಿವಿಧ ಪ್ರಕಾರಗಳಲ್ಲಿ ಕೃಷಿ ಮಾಡಿ ಸಾಹಿತ್ಯ ಸೇವೆ ಸಲ್ಲಿಸಿದ್ದನ್ನು ತುಂಬು ಹೃದಯದಿಂದ ನೆನೆಯಲಾಯಿತು. 1950ರಲ್ಲಿ ನವೋದಯದ ಪರಿಪಕ್ವ ಕಾಲದಲ್ಲಿ ಸುನೀತಗಳನ್ನು ರಚಿಸಿ ಸಹೃದಯರನ್ನು ಬೆಳೆಸಲು ಸಹಾಯ ಮಾಡಿದ ಕೋಮಲ ಹೃದಯ ಕವಿ. ಪ್ರತಿ ತಿಂಗಳಿಗೊಮ್ಮೆ ಎಲ್ಲ ಸ್ನೇಹಿತರು ಕೂಡಿ ತಾವು ರಚಿಸಿದ ಕವನಗಳನ್ನು ಓದಿ ತಮ್ಮ ತಮ್ಮ ಅಭಿಪ್ರಾಯವನ್ನು, ವಿಮರ್ಶೆಯನ್ನು ಮಾಡಿ ಸೂಕ್ತ ಸಲಹೆಗಳನ್ನು ನೀಡುವ ಮೂಲಕ ಕಾವ್ಯಲೋಕದಲ್ಲಿ ಇತರರು ಬೆಳೆಯಲು ಸಹಕಾರಿ ಪರಿಸರವನ್ನು ನಿರ್ಮಿಸುವಲ್ಲಿ ಕವಿಯ ಕೊಡುಗೆ ಅಪಾರ.

—ಕೆ.ಪಿ. ರಾಮಗುಂಡಿ, ಬೈಲಹೊಂಗಲ

## ಮನಗೆದ್ದ 'ಸರಿಗಮಪ'

ಝೀನಲ್ಲಿ ಜನೋಪಯೋಗಿ ಕಾರ್ಯಕ್ರಮ ಬರುತ್ತಿವೆ. ಬಡವ, ಬಲ್ಲಿದ ಎಣಿಸದೆ ಪ್ರತಿಭೆಗೆ ತಕ್ಕ ಪುರಸ್ಕಾರ ನೀಡುತ್ತಿರುವುದು ಶ್ಲಾಘನೀಯ. 'ಸರಿಗಮಪ' ಕಾರ್ಯಕ್ರಮವಂತೂ ಸಂಗೀತ ಪ್ರತಿಭೆಗಳನ್ನು ಹೊರತರುವ, ದೇಶೀಯ ಗಾಯಕರನ್ನು ಹುರಿದುಂಬಿಸುವ ಮತ್ತು ಪ್ರೋತ್ಸಾಹಿಸುವ ಝೀ ತಂಡ ಅಭಿನಂದನಾರ್ಹ. 'ಕನ್ನಡದ ಕಣ್ಮಣಿಗಳು' ಎನ್ನುವ ಕಾರ್ಯಕ್ರಮ ಮಕ್ಕಳಲ್ಲಿ ಭಾಷೆಯ ಮತ್ತು ಭಾಷಣದ ನೈಪುಣ್ಯವನ್ನು ಒರೆ ಹಚ್ಚಿ ಪ್ರೋತ್ಸಾಹಿಸುವಲ್ಲಿ ಹೆಸರಾಗಿದೆ. 'ಕಾಮಿಡಿ ಕಿಲಾಡಿಗಳು', 'ಡ್ರಾಮಾ ಜ್ಯೂನಿಯರ್ಸ್' ನಿಂದಲೂ ನಟನಾ ಪ್ರತಿಭೆಗಳು ಹೊರಬಂದು ಖ್ಯಾತನಾಮರಾಗಿದ್ದಾರೆ. ಇಂತಹ ಕಾರ್ಯಕ್ರಮಗಳಿಗೆ ಸ್ವಾಗತ.

—ನಾ.ಮ. ಮರುಳಾರಾಧ್ಯರು, ಆಂಧ್ರಪ್ರದೇಶ

## ಖಳನಾಯಕಿರ ಪಾರುಪತ್ಯ

ಧಾರಾವಾಹಿಗಳಲ್ಲಿ ಖಳನಾಯಕಿಯರದೇ ಪ್ರಾಬಲ್ಯ 'ಜೋಡಿಹಕ್ಕಿ'ಯಲ್ಲಿ ಜಾನಕಿಗೆ ನಂದಿತಾ– ಕಾದಂಬರಿ ಖಳನಾಯಕಿಯಾಗಿ ಕಾಡಿದರೆ 'ಯಾರೇ ನೀ ಮೋಹಿನಿ'ಯಲ್ಲಿ ಮಾಯಾ ನಕ್ಷತ್ರಿಕನಂತೆ ವಕ್ಕರಿಸಿದ್ದಾಳೆ. 'ಕಮಲಿ'ಯಲ್ಲಿಯಂತು ಕಾಮಿನಿ–ಊರ್ಮಿಳಾ–ಅನಿತಾ ತ್ರಿಮೂರ್ತಿಗಳಾಗಿ ಕಮಲಿಗೆ ತೊಂದರೆ ಕೊಡುತ್ತಿರುವುದನ್ನು ಪ್ರತಿನಿತ್ಯ ನೋಡುತ್ತಲೇ ಇರುತ್ತೇವೆ. 'ಸುಬ್ಬುಲಕ್ಷ್ಮಿ ಸಂಸಾರದಲ್ಲಿ' ಡಯಾನಾ ಮಂಥರೆಯಾದರೆ ಶನಿಯಾಗಿ ಸುಬ್ಬಲಕ್ಷ್ಮಿಯನ್ನು ಕಾಡುತ್ತಾಳೆ. ಧಾರಾವಾಹಿಗಳಿಗೆ ಖಳನಾಯಕಿಯರ ಕಾರುಬಾರು ಅಂತ್ಯ ಯಾವಾಗ? ವಿಷ ಹಾಕುವುದು? ಬೆಂಕಿ ಹಚ್ಚುವುದು, ಅಪಘಾತ ಮಾಡಿಸುವುದು ಖಳನಾಯಕಿಯರ ಹವ್ಯಾಸವೇ?

—ರಾಮಲಿಂಗಯ್ಯ ಶಿದ್ದಯ್ಯಸ್ವಾಮಿ, ಕುತನೂರು

## ಕನ್ನಡ ಅಭಿಮಾನಿ

ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆಯವರು ಝೀನ 'ವೀಕೆಂಡ್ ವಿಥ್ ರಮೇಶ್' ಕಾರ್ಯಕ್ರಮದಲ್ಲಿ ಭಾಗವಹಿಸಿ ತಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳುವುದರ ಮೂಲಕ ಮತ್ತು ಅವರ ಕಾರ್ಯವೈಖರಿಯ ಮೂಲಕ ಮೆಚ್ಚುಗೆಗೆ ಪಾತ್ರರಾದರು. ಅಂದು ಆ ವೇದಿಕೆಯಲ್ಲಿ ಉಪಸ್ಥಿತರಿದ್ದ ಹೆಗ್ಗಡೆ ದಂಪತಿ ನಮ್ಮನ್ನು ಧನ್ಯರಾಗಿಸಿದರು. ಝೀ ವಾಹಿನಿಯವರು ಅವರಿಗೆ ಇಂಗ್ಲಿಷ್‌ನಲ್ಲಿ ಪತ್ರ ಬರೆದರು. ಅವರು ಅದಕ್ಕೆ ಅಚ್ಚ ಕನ್ನಡದಲ್ಲಿ ಉತ್ತರಿಸಿದ್ದು, ಅವರ ಅಭಿಮಾನಕ್ಕೆ ಹಿಡಿದ ದರ್ಪಣದಂತಿತ್ತು.

—ಪೂರ್ಣಿಮಾ ಆಗುಂಬೆ, ಬೆಂಗಳೂರು

ಪ್ರಬುದ್ಧ ಕಾರ್ಯಕ್ರಮ: ಹಳಸಲು ಧಾರಾವಾಹಿ ನೋಡಿ ನೋಡಿ ಬೇಸತ್ತಿದ್ದ ನೋಡುಗರಿಗೆ, 'ವೀಕ್ ಎಂಡ್...' ನೋಡುಗರಿಗೆ, ಮೆಚ್ಚುಗೆ ಉಂಟು ಮಾಡುವುದರಲ್ಲಿ ಸಂಶಯವಿಲ್ಲ.

—ಸುಂದರ್, ವರಲಕ್ಷ್ಮಿ ಮುಕುಂದರಾವ್ ಬೆಂಗಳೂರು

## ಪ್ರತಿಯೊಬ್ಬರು ಸೂತ್ರಧಾರರೇ!

ನಾಟಕದಲ್ಲಿ ಮುಂದಾಗುವ ಸನ್ನಿವೇಶವನ್ನು ಸೂತ್ರಧಾರ ನಿರ್ವಹಿಸುತ್ತಾನೆ. ಆದರೆ 'ಅಗ್ನಿಸಾಕ್ಷಿ'ಯಲ್ಲಿ ಪ್ರತಿಯೊಬ್ಬ ಪಾತ್ರದಾರಿಯು ಮುಂದಾಗುವ ಸನ್ನಿವೇಶವನ್ನು ಹೇಳುತ್ತಾ ಧಾರಾವಾಹಿಯನ್ನು ಒಂದಲ್ಲ ಒಂದು ರೀತಿ ಎಳೆಯುತ್ತಾ ವೀಕ್ಷಕರಿಗೆ ಒಂದು ರೀತಿಯ ಮಾನಸಿಕ ಹಿಂಸೆ ನೀಡುತ್ತಿದ್ದಾರೆ. ಸಾಕಷ್ಟು ನ್ಯೂನ್ಯತೆಗಳು ಈ ಧಾರಾವಾಹಿಯಲ್ಲಿ ಇವೆ. ಈಗ ನಾಯಕ ಸಿದ್ಧಾರ್ಥ ಸಿಗಬೇಕು ಧಾರಾವಾಹಿ ಮುಗಿಯಬೇಕು.

—ಎನ್.ಎಸ್.ಚಂದ್ರಶೇಖರ್, ಬೆಂಗಳೂರು.